ವೇದ, ಶಾಸ್ತ್ರ-ಪುರಾಣ-ಆಗಮ-ಉಪನಿಷತ್ತುಗಳನ್ನು ಭೇದಿಸುವ ಕವಿ ಅಕ್ಷರ ವಂಚಿತ ಜಾನಪದರಿಗೆ ಜ್ಞಾನಭಂಡಾರಿಯಾಗುವನು.

ಮಹಾಭಾರತದಲ್ಲಿ ಕೃಷ್ಣ ಪಾಂಡವರ ರಾಯಭಾರಿಯಾದರೆ, ರಾಧಾನಾಟದಲ್ಲಿ ರಾಧೆ-ಕೃಷ್ಣೆಯರಿಗೆ ಸಖಾರಾಮ ಒಂದುಗೂಡಿಸುವ ರಾಯಭಾರಿ. ಇಬ್ಬರ ಮಧ್ಯೆ ಸಂಧಾನ ಏರ್ಪಡಿಸುವ ಸಖಾರಾಮ ಇವರಿಬ್ಬರಲ್ಲಿರುವ Male ego, Female egoಗಳನ್ನು ಕಿತ್ತು ಹಾಕುವನು. ಪರಂಪರೆಯಲ್ಲಿ ರಾಧಾಕೃಷ್ಣರ ಸಂಬಂಧವು ಎಲ್ಲರಿಗೂ ತಿಳಿದದ್ದೇ. ಆದರೆ 'ರಾಧಾನಾಟ'ದಲ್ಲಿ 'ಸತಿ' ಭಾವ ಆಸಕ್ತಿಯನ್ನು ಪರಿವರ್ತಿಸಿ ಸೋದರ ಭಾವ ಸಂಬಂಧವನ್ನು ಹುಟ್ಟು ಹಾಕಿದ್ದು ಈ ಮಿಥ್ ಡಿಸ್ಟಾರ್ಶನ್!

ಕೃಷ್ಣನಿಗೆ ರಾಧೆ-

**ರೀತಿ ತಪ್ಪಿ ನೀನು ನಡೀ ಬ್ಯಾಡೋ ಬೇಮಾನಿ|**
**ನಡಪತಿಲೇ ನಾ|**
**ತಂಗಿಯಾಗಬೇಕು ನುಡಿ ನಿರ್ತಿದ್ದು ನಡಿಬೇಕಣ್ಣಾ**
||**ಪ**||
**ನಾನು ನೀನು ಅಣ್ಣಾ ತಂಗಿ|**
**ಕಮಲದೊಳು ಇದ್ದಂಗ ಭೃಂಗಿ|**
**ನಾವಿಬ್ಬರು ಒಡಹುಟ್ಟಿ |**
**ನೀ ಮಾಡೋ ಮನ ಘಟ್ಟಿ**

ಹೀಗೆ ಸೋದರ– ಸೋದರಿ ಸಂಬಂಧ ಹೇಳಿ ಮನುಷ್ಯ ಜನ್ಮವನ್ನು ಕೇವಲ ಕಾಮ, ಪ್ರೇಮದಿಂದ ಸಾರ್ಥಕ ಮಾಡಲು ಸಾಧ್ಯವಿಲ್ಲ. ನಿನ್ನ ಸತಿಯನ್ನು ನಾ ತಾಯಿ ಎಂದು ತಿಳಿದಿರುವೆ ಎನ್ನುವ ರಾಧೆ ಪುರಾಣ ಪರಿಕಲ್ಪನೆಯ ಸಂಬಂಧವನ್ನು ಅಳಿಸಿ ಹಾಕುವಳು.

## ಶ್ರೀಕೃಷ್ಣ ಪಾರಿಜಾತ

ಭಾಗವತ ಪುರಾಣದಿಂದ ಆಯ್ದ ಪಾರಿಜಾತ ಹೂವಿನ ಕಥೆ. ಇದರ ಮೇಲೆ ಆಂಧ್ರಪ್ರದೇಶದ 'ಭಾಮಾ ಕಲಾಪಂ'ನ ಪ್ರಭಾವದ ಸಾಧ್ಯತೆಯಿದೆ. ಇದು ಕೃಷ್ಣನ ಮಹಿಮೆ ಹೇಳುವ ಕಥೆ. ದೇವೇಂದ್ರನ ಪಾರಿಜಾತದ ಹೂವಿಗಾಗಿ ರುಕ್ಮಿಣಿ-ಸತ್ಯಭಾಮೆಯರ ಕದನವು ಜರುಗುತ್ತದೆ. ರುಕ್ಮಿಣಿ ಹಿರಿಯಳಾದರೂ ಸತ್ಯಭಾಮೆ ಎದ್ದು ಕಾಣುವ ಪಾತ್ರ. ನಾರದ ದೇವಲೋಕದ ಈ ಪಾರಿಜಾತದ ಹೂವನ್ನು ರುಕ್ಮಿಣಿಗೆ ತಂದು ಕೊಟ್ಟು,- 'ಇದು ಯಾರ ಬಳಿ ಇರುತ್ತದೆಯೋ ಅಲ್ಲಿ ಕೃಷ್ಣ ಪರಮಾತ್ಮ ವಾಸವಾಗಿರುತ್ತಾನೆ' ಎಂದು ಸತ್ಯಭಾಮೆಗೆ ಚಾಡಿ ಹೇಳಿ ಇಬ್ಬರ ನಡುವೆ ಜಗಳ ಹಚ್ಚಿ ಹೋಗುವನು. ಹೀಗೆ ಶ್ರೀಕೃಷ್ಣ ಪಾರಿಜಾತದಲ್ಲಿ ಕೃಷ್ಣ ಮತ್ತು ಸತ್ಯಭಾಮೆಯರ ವಿಯೋಗ ಸಂಯೋಗಗಳನ್ನು ಕಾಣಬಹುದು.

ರಾಯಚೂರಿನ ಅಪರಾಳ ತಮ್ಮಣ್ಣ ರಚಿಸಿದ ಕಾವ್ಯವನ್ನು ಬೆಳಗಾವಿ ಜಿಲ್ಲೆಯ ಕುಲಗೋಡ ತಮ್ಮಣ್ಣ ನಾಟ್ಯವಾಗಿಸಿ ಪ್ರಯೋಗಿಸಿದ. ಇದು ಪುರಾಣ ಕಾವ್ಯ ನಾಟಕವಾದರೂ ದೂತೆ ಕೃಷ್ಣ, ದೂತೆ ರುಕ್ಮಿಣಿ -ಸತ್ಯಭಾಮೆ ಹಾಗೂ ದೂತೆ ಕೊರವಂಜಿ ಸನ್ನಿವೇಶಗಳ ಮೂಲಕ ಪಠ್ಯವು ವರ್ತಮಾನವನ್ನು ಮೀರಿ ನಿಂತು ಧ್ವನಿಸುತ್ತದೆ. ಉದಾ: ಗಣೇಶ ಸ್ತುತಿಯಲ್ಲಿ ಬರುವ ಪ್ರಸಂಗ:

**ಮರಿದೂತೆ:** ಇವರು ಬಂದಂಥೋರು ದಾರು?

**ದೂತೆ:** ಇವರು ಬಂದು ವಿಘ್ನಗಳನ್ನೆಲ್ಲ ದೂರ ಮಾಡೋ ವಿಘ್ನೇಶ್ವರ...

**ಮರಿದೂತೆ:** ಎಷ್ಟು ದೂರ ಮಾಡತಾರು? ಮೈಸೂರು ತನಕ ಮಾಡತಾರು?

**ದೂತೆ:** ಇಲ್ಲ, ತಲಕಾವೇರಿ ತನಕಾನೂ ದೂರ ಮಾಡಿ ಖಾಯಮ್ಮಾಗಿ ಕಾವೇರಿ ಸಮಸ್ಯೆಯನ್ನೂ ಬಗೆ ಹರಿಸುತಾರು ತಗೋ...! ಹುಚ್ಚಿ ಹಂಗೆಲ್ಲ ಚೇಷ್ಟಾ ಮಾಡಬಾರದು... ಇವರು ಸಾಕ್ಷಾತ್ ದೇವರು. ಜನರ ಕಷ್ಟಗಳನ್ನು ದೂರ ಮಾಡತಾರು...

ಹೀಗೆ ಮೂಲ ಪಠ್ಯಕ್ಕೆ ಧಕ್ಕೆಯಾಗದಂತೆ ವರ್ತಮಾನದ ಸಂಗತಿಗಳನ್ನು ವಿಶ್ಲೇಷಣೆಗೆ ಒಡ್ಡುವ, ವಿಮರ್ಶಿಸುವುದನ್ನು ಜಾನಪದರು ಮಾಡುತ್ತಾರೆ. ದೇವರಾದ ಶ್ರೀಕೃಷ್ಣ, ಈ ಪಾರಿಜಾತ ಆಟದಲ್ಲಿ 'ಕಪ್ಪು ಗಾಗಲ್' ಹಾಕಿಕೊಂಡು ರಂಗ ಮಂಚಕ್ಕೆ ಆಗಮಿಸುತ್ತಾನೆ. ಒಮ್ಮೊಮ್ಮೆ ರಿಸ್ಟ್ ವಾಚ್ ಕೈಯಲ್ಲಿರುತ್ತದೆ. ನಮ್ಮ ಗ್ರಾಮೀಣರು ಈ ತಮ್ಮ ಆಧುನಿಕ ಕೃಷ್ಣನನ್ನು 'ದೇವರು' ಎಂದೇ ಸ್ವೀಕರಿಸಿರುತ್ತಾರೆ. ಅಷ್ಟು ಮುಕ್ತತೆ ಹೊಂದಿದ ಪ್ರೇಕ್ಷಕನ ಮನೋರಂಗವಿದೆ. ಅಂಥ ಪೋಷಾಕನ್ನು ಗ್ರಾಮೀಣ ಜನರೇ ಸೃಷ್ಟಿಸಿರುವರು. ಮಿಥ್ ಮತ್ತು ಮೆಟಾಫರ್ ಅನ್ನು ಒಡೆದು ಮರು ಕಟ್ಟುವ ಕಲೆ ಗ್ರಾಮ ರಂಗ ಕಲೆಗಿದೆ. ಅವರು ನಗರ ಬದುಕಿನ ಯಾವ